ಈ) ಕೆಪಾಸಿಟರುಗಳನು ಅಳವಡಿಸುವುದು.

೧) ೧೧ ಕೆ.ವಿ. ಮಾರ್ಗಗಳಲ್ಲಿ ಮತ್ತು ೧೧೦ ಕೆ.ವಿ. ೬೮ ಕೆ.ವಿ. ಕೇಂದ್ರಗಳಲ್ಲಿ.

೨) ಮುಂಡಳಿಯಲ್ಲಿನ ಜಾಗೃತ ದಳವನ್ನು (ಎಲ್ಲಿ ಅವಶ್ಯಕವೋ ಅಲ್ಲಿ) ಸಮರ್ಥಗೊಳಿಸುವುದು. ಹೈಟೆನ್‌ಷನ್ ಮತ್ತು ಇತರ ಸ್ಥಾವರಗಳಲ್ಲಿ ಇರುವ ತಪ್ಪು ಕಳ್ಳತನ ಅಥವಾ ದುರುಪಯೋಗಗಳನ್ನು ಕಂಡುಹಿಡಿಯಲು ಅನಿರೀಕ್ಷಿತ ತನಿಖೆ ಮಾಡುವುದು.

ಸಭೆಯಂ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಸಚಿವರುಗಳಾದ ಶ್ರೀ ಜಿ. ಬಸವಣ್ಣೆಪ್ಪ, ಶ್ರೀ ಎಂ.ಪಿ. ಪ್ರಕಾಶ್, ಡಾ: ಜೀವರಾಜ್ ಆಳ್ವ ಮತ್ತು ಶ್ರೀ ಪಿ.ಜಿ.ಆರ್. ಸಿಂಧ್ಯ ಅವರುಗಳ ಹೆಸರಿನ ಮುಂದಿರುವ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

೧) ಅ) ಕರ್ನಾಟಕ ಅಲ್ಪ ಸಂಖ್ಯಾತರ ನಿಗಮದ ೧೯೮೬-೮೭ನೇ ಸಾಲಿನ ಮೊದಲನೇ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳು.

ಆ) ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ೧೯೮೬-೮೭ನೇ ಸಾಲಿನ ಹತ್ತನೆಯ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳು

೨) ೧೯೫೬ನೇ ಇಸವಿಯ ಕಂಪನಿಗಳ ಶಾಸನದ ಪ್ರಾಗೂ ೬೧೯ (ಎ)ನೇ ಕಲಮಿನ ಮೇರೆಗೆ ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ೧೯೮೫-೮೬ನೇ ಸಾಲಿನ ೧೬ನೇ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

೩) ೧೯೭೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ ೪೫ (೨) ಕಲಮಿನ ಮೇರೆಗೆ ಕರ್ನಾಟಕ ವಿಶ್ವವಿದ್ಯಾನಿಲಯದ ೧೯೮೫-೮೬ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

೪) ೧೯೫೦ನೇ ಇಸವಿಯ ರಸ್ತೆ ಸಾರಿಗೆ ನಿಗಮ ಶಾಸನದ ೩೫ (೩)ನೇ ಕಲಮಿನ ಮೇರೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ೧೯೮೬-೮೭ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಎಲ್ಲಾ ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

ಅರ್ಜಿಯನ್ನು ಒಪ್ಪಿಸುವುದು

ಶ್ರೀ ವಂಟ್ಲಾರಿ ಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಅಥಣಿ ತಾಲ್ಲೂಕಿನ ಮಂಹಿಷಿವಾಡಗಿ ಗ್ರಾಮ ಸೇವಾ ಸಹಕಾರೀ ಸಂಘದ ನ್ಯಾಯ ಬೆಲೆಯ ಅಂಗಡಿಯನ್ನು ರದ್ದುಪಡಿಸಿ ಶ್ರೀ ಮಹಾವೀರ ಹಾಲಿನ ಉತ್ಪಾದಕ ಸಹಕಾರೀ ಸಂಘಕ್ಕೆ ಕಾನೂನನ್ನು ಉಲ್ಲಂಘನೆ ಮಾಡಿ ಧಾನ್ಯ ವಿತರಣೆಯ ವ್ಯವಸ್ಥೆಯನ್ನು ಮಂಜೂರು ಮಾಡಿರುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನು ಒಪ್ಪಿಸಲಾಯಿತು.

ಗಮನ ಸೆಳೆಯುವ ಸೂಚನೆ

Hardship caused to the poor farmers of yadgir Taluk Gulbarga District due to collection of land revenue.

SRI M. MALLIKAPJUNA M. KHARGE.—Mr. Speaker, I call the attention of the Minister for Revenue, planning and Irrigation to

the hardship and harassment caused to the poor farmers of Yadgir Taluk, Gulbarga District due to the collection of arrears of land evenue forcibly since 1954 to date.

ಅಧ್ಯಕ್ಷರಂ.—ರೆವಿನ್ಯೂ ಮಂಶ್ರಿಗಳಿಲ್ಲ, ಅಲ್ಲಿ ಹೋಗಿದ್ದಾರೆ ಬರುತ್ತಾರೆ, ಬಂದ ಕೂಡಲೇ ಉತ್ತರ ಕೊಡಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವಾಗ ಬರುತ್ತಾರೆ, ಯಾವಾಗ ಕೊಡಿಸುತ್ತೀರಿ.

ಅಧ್ಯಕ್ಷರಂ.— ಪಟವಮಕ್ಕಿ ರತ್ನಾಕರ್‌ರವರದೂ ಇದೆ. ಉತ್ತರ ಕೊಡಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವಾಗ, ಈ ೨ ಆದಮೇಲೆ.

ಅಧ್ಯಕ್ಷರು.—ಪಟವಮಕ್ಕಿ ರತ್ನಾಕರ ಅವರದಕ್ಕೆ ಟೈಂ ಬೇಕು, ಈಗ ಅವರು ಬರುತ್ತಾ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಟೈಂ ಬೇಕು ಅಂದರೆ ಏನು ಅಧ್ಯಕ್ಷರೆ:

ಅಧ್ಯಕ್ಷರು.—ಈಗ ಬಂದು ಕೆಲಸ ಮಾಡೋಣ, ತಡೆಯಿರಿ. ಈಗ ೩೩೪ ಅನ್ನು ತೆಗೆದು ಕೊಳ್ಳೋಣ ಹೋಗಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕಾಲಿಂಗ್ ಅಟೆನ್‌ಷನ್ ಕೇಳಿದರೆ ಕಾಲಿಂಗ್ ಅಟೆನ್‌ಷನ್‌ಗೂ ಉತ್ತರ ಕೊಡುವುದಕ್ಕೆ ಮಂಶ್ರಿಗಳಿಲ್ಲ, ಪೇಪರ್ಸ್ ಲೇಡ್ ಮಾಡುವುದಕ್ಕೂ ಮಂಶ್ರಿಗಳಿಲ್ಲ, ಇದು ಹೇಗೆ. ಮಂಶ್ರಿಗಳು ಟೂರ್ ಏನಾದರೂ ಹೋಗಿದ್ದಾರೋ ಹೇಗೆ.

Mr. Speaker.—I do agrie with you. ಅದರದು ಏನೂ ಪ್ರಶ್ನೆ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವುದಕ್ಕೂ ಉತ್ತರ ಇಲ್ಲ. ಹಾಗಾದರೆ ನಾವು ಅಪ್ಲಿಕೇಷನ್ ತೆಗೆದುಕೊಂಡು ಅಲ್ಲಿ ಹೋಗಬೇಕೇ.

ಅಧ್ಯಕ್ಷರು.—ಈಗ ೩೩೪.

ಶ್ರೀ ಬಿ. ಸ್ವಾಮಿರಾವ್.—ಪ್ರಶ್ನೆಗೆ ಉತ್ತರ ಇಲ್ಲ, ೩೩೪ಕ್ಕೆ ಉತ್ತರ ಇಲ್ಲ, ಕಾಲಿಂಗ ಅಟೆನ್‌ಷನ್‌ಗೆ ಉತ್ತರ ಇಲ್ಲ, ಯಾವುದಕ್ಕೂ ಉತ್ತರ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಭೆ ಸೇರುವುದೇ ಬೇಕಾಗಿಲ್ಲ, ಉತ್ತರ ಇಲ್ಲ ಅಂದರೆ.

ಅಧ್ಯಕ್ಷರು.—ಈಗ ಉತ್ತರ ಕೊಡಿಸುವುದಕ್ಕೆ ಬರುತ್ತದೆ. ಇವತ್ತು ೩ ಕಾಲಿಂಗ್ ಅಟೆನ್‌ಷನ್ ಇದೆ. ಒಂದರ ಹಿಂದೆ ಒಂದನ್ನು ತೆಗೆದುಕೊಳ್ಳೋಣ. ಈಗ ಎಜುಕೇಷನ್ ಮಿನಿಸ್ಟರದು.

ಶ್ರೀ ಪಟವಮಕ್ಕಿ ರತ್ನಾಕರ.—ಅಧ್ಯಕ್ಷರೆ ಏನು, ಅವರಿಗೆ ಹೇಳಿಬಿಟ್ಟರಾಯಿತೇ ನಮ್ಮದು ಏ ೧?

ಅಧ್ಯಕ್ಷರು.—ಈಗ ನಾನು ನಿಮಗೆ ಕನ್ನಡದಲ್ಲಿ ಹೇಳಿದೆನೋ ಅಥವಾ ನಿಮಗೆ ತಿಳಿಯದ ಭಾಷೆಯಲ್ಲಿ ಹೇಳಿದೆನೋ. ನಾನು ಏನು ಹೇಳಿದೆ, ಮಂಶ್ರಿಗಳು ಈಗ ಬರುತ್ತಾ ಇದ್ದಾರೆ, ೩ ಜನ ಮಂಶ್ರಿಗಳು ಬೇಕಾಗುತ್ತದೆ. ಅವರು ಬಂದಿದ್ದಾರೆ, ೩ನೇ ಕಾಲಿಂಗ್ ಅಟೆನ್‌ಷನ್ ಈಗ ತೆಗೆದು ಕೊಳ್ಳುತ್ತೇನೆ, ಆಮೇಲೆ ನಿಮ್ಮದು ತೆಗೆದುಕೊಳ್ಳುತ್ತೇನೆ, ಒಟ್ಟಿನಲ್ಲಿ ನಿಮಗೆ ಇವತ್ತು ಉತ್ತರ ಬೇಕೋ ಬೇಡವೊ.

(ಗೊಂದಲ)

ಅಧ್ಯಕ್ಷರು.—ಲಕ್ಷ್ಮೀಸಾಗರ್‌ರವರೆ, ಸಂಬಂಧಪಟ್ಟ ಮಂಶ್ರಿಗಳಿಗೆ ಇರುವುದಕ್ಕೆ ಹೇಳಿ. ಈಗ ನಾನು ಅವರಿಗೆ ಹೇಳಿದ್ದೇನೆ.

ಶ್ರೀ ಪಟವಮಕ್ಕಿ ರತ್ನಾಕರ್.—ಸದನಕ್ಕೆ ಗೌರವ ಇದೆ. ಮಂಶ್ರಿಗಳು ಗವನ ಸೆಳೆಯುವ ಸೂಚನೆ ಅಥವಾ ಪ್ರಶ್ನೆಗಳು ಬಂದಾಗ ಉತ್ತರ ಕೊಡತಕ್ಕ ಜವಾಬ್ದಾರಿ ಹೊತ್ತಿರಬೇಕು ಅಥವಾ ಅವರ ಬದಲಿಗೆ ಯಾರಿಗಾದರೂ ಕೊಟ್ಟು ಹೋಗಿರಬೇಕು. ನನ್ನ ಗವನ ಸೆಳೆಯುವ ಸೂಚನೆಗೆ ಉತ್ತರಾನೇ ಬಂದಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ನಮ್ಮದು ತೆಗೆದುಕೊಂಡರೆ ಅವರದೂ ತೆಗೆದುಕೊಂಡ ಹಾಗೆ ಆಯಿತಲ್ಲ ಅಧ್ಯಕ್ಷರೆ.

(ಗೊಂದಲ)

ಅಧ್ಯಕ್ಷರು.—ನೀವೂ ಒಂದೊಂದು ಸಲ್ಲ ಇರುವುದಿಲ್ಲ. ಎಲ್ಲವನ್ನೂ ಸುಧಾರಿಸಿಕೊಂಡು ಹೋಗ ಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸದನದಲ್ಲಿ ಇಲ್ಲದಿದ್ದರೆ ಆ ಮಾತು ಬೇರೆ.

ಅಧ್ಯಕ್ಷರು.—ಮಂತ್ರಿಗಳಾಗಿ ನೀವೂ ಕೆಲಸ ಮಾಡಿದ್ದೀರಿ, ಮಂತ್ರಿಗೆ ಡಿಫಿಕಲ್ಟಿ ಏನು ಇರುತ್ತದೆ ಎಂದು ನಿಮಗೂ ಗೊತ್ತಿದೆ, ನಮಗೂ ಗೊತ್ತಿದೆ, ಅವರಿಗೂ ಗೊತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಡಿಫಿಕಲ್ಟಿ ಇದ್ದರೆ ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಪಟಮಕ್ಕಿ ರತ್ನಾಕರ್.—ಕೊನೇ ಪಕ್ಷ ಉತ್ತರವನ್ನಾದರೂ ತರಿಸಿಕೊಡಿ.

ಅಧ್ಯಕ್ಷರು.—ತರಿಸಿಕೊಡುತ್ತೇನೆ, ಕೂಡಿರಿ.

ಶ್ರೀ ಪಟಮಕ್ಕಿ ರತ್ನಾಕರ್.—ನಮ್ಮ ರೆಫರೆನ್ಸ್‌ಗೆ ಉತ್ತರ ಬೇಕಲ್ಲ.

ಅಧ್ಯಕ್ಷರು.—ನೋಡಿ ಮಂತ್ರಿಗಳು ಉತ್ತರ ಹೇಳುವುದಕ್ಕೆ ಮೊದಲೆ ನಿಮಗೆ ..

ಶ್ರೀ ಪಟಮಕ್ಕಿ ರತ್ನಾಕರ್.—ಪೂರಕ ಪ್ರಶ್ನೆಗಳನ್ನು ಕೇಳಲಿಕ್ಕೆ ನಮಗೆ ಉತ್ತರ ಎಲ್ಲಿ ಉಂಟು.

ಅಧ್ಯಕ್ಷರು.—ನೀವು ಎದ್ದೆದ್ದು ಹೀಗೆ ಶಾಣತನ ಮಾಡಿದರೆ ಹೇಗೆ.

ಶ್ರೀ ಪಟಮಕ್ಕಿ ರತ್ನಾಕರ್.—ಪೂರಕ ಪ್ರಶ್ನೆಗಳನ್ನು ಕೇಳಲಿಕ್ಕೆ ನಮಗೆ ಉತ್ತರ ಇಲ್ಲ.

ಅಧ್ಯಕ್ಷರು.—ನಿಮಗೆ ಉತ್ತರ ತರಿಸಿಕೊಡುತ್ತೇನೆ ಎಂದು ಹೇಳಿದೆನೋ ಇಲ್ಲವೋ.

ಶ್ರೀ ಪಟಮಕ್ಕಿ ರತ್ನಾಕರ್.—ನನ್ನ ಪ್ರಶ್ನೆಯನ್ನು ತಾವು ಅರ್ಥ ಮಾಡಿಕೊಳ್ಳಲಿಲ್ಲ. ಪೂರಕ ಪ್ರಶ್ನೆಗಳನ್ನು ಕೇಳಲಿಕ್ಕೆ ಉತ್ತರ ಬಂದಿಲ್ಲ.

ಅಧ್ಯಕ್ಷರು.—ದಯವಿಟ್ಟು ಕೂಡಿರಿ.

(ಗೊಂದಲ)

ಅಧ್ಯಕ್ಷರು.—ಮಂತ್ರಿಗಳು ಇನ್ನೂ ಬಂದಿಲ್ಲ ಬರುತ್ತಾರೆ, ಬಂದ ಕೂಡಲೇ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ಅವರ ಮರ್ಜಿಗೆ ತಕ್ಕಹಾಗೆ ನಡೆಯಲಿಕ್ಕೆ ನಮಗೆ ಸಾಧ್ಯವಿಲ್ಲ. ಉತ್ತರದ ಕಾಪಿ ಕಳಿಸಿಕೊಡಿ.

ಅಧ್ಯಕ್ಷರು.—ನಾನು ಹೇಳಿದ್ದೇನೆ ಅವರಿಗೆ. ತಾವು ಉತ್ತರ ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಒಂದು ನಿಮಿಷ ಅಧ್ಯಕ್ಷರೆ.....

(ಗೊಂದಲ)

ಅಧ್ಯಕ್ಷರು.—ಛೀಮಾರಿ ಹಾಕುವುದಿದ್ದರೆ ಪ್ರತಿನಿತ್ಯ ಹಾಕಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ಛೀಮಾರಿ ಹಾಕುವುದು, ಹೊರಗೆ ಕಳಿಸುವುದು ಸಸ್ಪೆಂಡ್ ಮಾಡಬೇಕಾದರೆ ದಿವಸ ೧೦ ಮಂದಿಗೆ ಮಾಡಬೇಕಾಗುತ್ತದೆ. ಈ ಕಡೆಗೂ ಬೇಡ, ಆ ಕಡೆಗೂ ಬೇಡ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಖರ್ಗೆಯವರು ಹೇಳಿರತಕ್ಕಂಥ ಮಾತನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಅವರು ಬರಬೇಕಾಗಿತ್ತು. ದಯವಾಡಿ ಅವರು ಸಹಕಾರ ಮಾಡಬೇಕು ಎಂದು ನಾನು ಅವರಲ್ಲಿ ಮನವಿ ಮಾಡುತ್ತೇನೆ.